Standard weights (enforcement in Bangalore Mandis).

Q.—489. Sri H. T. PUTTAPPA (Hoskote-Anekal—Scheduled Castes).—

Will the Government be pleased to state:—

whether they would immediately enforce the use of standard weights to avoid malpractices in Mandies at Bangalore?

A.—Sri H. SIDDAVEERAPPA (Minister for Home and Industries),—

Weights recognised under the Mysore Weights and Measures Act, 1902, are already in use.

ಶ್ರೀ ಎಚ್. ಟಿ. ಪುಟ್ಟಪ್ಪ —ಮಂಡಿಗಳಲ್ಲಿ ತಕ್ಕಡಿಗಳಲ್ಲಿ ಅಲೂಗಡ್ಡೆ ಮುಂತಾದುವುಗಳನ್ನು ತೂಗುವುದರಲ್ಲಿ ರೈತರಿಗೆ ಬಹಳ ಅನ್ಯಾಯವಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅವರು standard weightsನ್ನು ಉಪಯೋಗಿಸುತ್ತಾರೆಯೇ ಎಂದು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ standard weights ನ್ನು ಉಪಯೋಗಿಸುತ್ತಿದ್ದಾರೆಂದು ಹೇಳಿದ್ದೇನೆ. ತಕ್ಕಡಿ ಉಪಯೋಗಿಸುವುದನ್ನು ನಿಲ್ಲಿಸುವುದಕ್ಕೆ ಈಗಿರುವ ಕಾನೂನಿನ ಪ್ರಕಾರ ಸಾಧ್ಯವಿಲ್ಲ. ಅದರ ಬಗ್ಗೆ ಒಂದು Bill ಬರುವುದರಲ್ಲಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಚಿಂತ್ಯಾಲನ್ನು ಉಪಯೋಗಿಸುವಂತೆ ಮಾಡಲು ಸಾಧ್ಯವಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಈಗಿರತಕ್ಕ ಕಾನೂನು ಪ್ರಕಾರ ತೆಕ್ಕಡಿಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಅದನ್ನು ತಪ್ಪಿಸುವುದಕ್ಕಾಗಿ ಒಂದು ಮಸೂದೆ ಈ ಮಾನ್ಯ ಸಭೆಯ ಮುಂದೆ ಬರುವುದರಲ್ಲಿದೆ.

Foodgrains Prices (Steps to prevent fall).

Q.—634. Sri D. M. GOVINDARAJU (Nelamangala).—

Will the Government be pleased to state:—

(*a*) whether they are aware that there is a sudden fall in the prices of foodgrains;

(*b*) the steps they have taken to prevent the sudden fall in the prices of foodgrains;

(*c*) the policy of Government in this respect?

A.—Sri H. SIDDAVEERAPPA (Minister for Home and Industries).—

(*a*) There is a downward trend in the price structure of the foodgrains.

(*b*) and (*c*) Government are watching the price trends.

ಶ್ರೀ ಡಿ. ಎಂ. ಗೋವಿಂದರಾಜು.—ಆಹಾರದ ಬೆಲೆ ಇಳಿದು ಹೋಗಿರುವುದನ್ನು ತಡೆಗಟ್ಟಲು ಸರ್ಕಾರದವರು ಯಾವ ಕಾರ್ಯಕ್ರಮ ಕೈಕೊಂಡಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಹಣಕಾಸಿನ ಸಚಿವರು ಭಾಷಣಮಾಡುವವರೆಗೂ ಮಾನ್ಯ ಸದಸ್ಯರು ಸ್ವಲ್ಪ ತಾಳಬೇಕು. ಅವರ ಭಾಷಣದಲ್ಲಿ ಅದನ್ನು ತಿಳಿಸುತ್ತಾರೆ.

ಶ್ರೀ ಡಿ. ಎಂ. ಗೋವಿಂದರಾಜು.—ವ್ಯವಸಾಯಗಾರರ ದೃಷ್ಟಿಯಿಂದ ಬೆಲೆಗಳನ್ನು ನಿಗದಿಮಾಡುವುದು ಸೂಕ್ತವಲ್ಲವೇ?

(ಉತ್ತರವಿಲ್ಲ).

ಶ್ರೀ ಡಿ. ಎಂ. ಗೋವಿಂದರಾಜು.—ಆಹಾರ ಧಾನ್ಯಗಳ ಬೆಲೆಯನ್ನು ನಿಗದಿಮಾಡಲು ಇಂಡಿಯಾ ಸರ್ಕಾರದವರು ಏನಾದರೂ ಕಾರ್ಯಕ್ರಮ ಕೈಗೊಂಡಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ; ಹಣಕಾಸಿನ ಮಂತ್ರಿಗಳು ಈ ವಿಚಾರವನ್ನು ಬಜೆಟ್ ಭಾಷಣದಲ್ಲಿ ಹೇಳುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕಳೆದ ವರ್ಷ ನಮ್ಮ ಘನ ಸರ್ಕಾರದವರು ಭತ್ತ, ರಾಗಿ, ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆಮಾಡಿದ್ದರು; ಅದೇ ರೀತಿ ಈ ವರ್ಷವೂ ಮಾಡುವುದು ಅವಶ್ಯಕವಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಕಂಟ್ರೋಲ್ ಇಲ್ಲವಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಲೆ ಬಹಳ ಕಡಮೆಯಾದರೆ ರೈತರಿಗೆ ಅನಾನುಕೂಲವಾಗುತ್ತದೆಂಬುದನ್ನು ಮನಗಂಡು ಈಗಲೂ ಕೊಂಡುಕೊಳ್ಳುವುದಕ್ಕಾಗುವುದಿಲ್ಲವೇ?

Sri H. SIDDAVEERAPPA.—Conditions are quite different now.

ಶ್ರೀ ಎ. ವಿ. ನರಸಿಂಹರೆಡ್ಡಿ.—ಕೇಂದ್ರ ಸರ್ಕಾರದವರು ಈಚೆಗೆ ರಫ್ತು ಮಾಡಲಿಕ್ಕೆ ಅವಕಾಶ ಕೊಟ್ಟಿರುವುದರಿಂದ, ನಮ್ಮಲ್ಲಿ ಹೆಚ್ಚಿಗೆ ದವಸವಿದ್ದರೆ, ಅದನ್ನು ಸರ್ಕಾರದವರು ತೆಗೆದುಕೊಂಡು ರಫ್ತುಮಾಡುವುದಕ್ಕಾಗುವುದಿಲ್ಲವೇ?

Sri H. SIDDAVEERAPPA.—As I have already submitted, await what the Finance Minister has to say about it.

ಶ್ರೀ ಬಿ. ವಿ. ನಾರಾಯಣರೆಡ್ಡಿ.—(*b*) ಮತ್ತು (*c*) ಪ್ರಶ್ನೆಗೆ ಉತ್ತರವಾಗಿ, 'ಬೆಲೆಗಳು ಯಾವ ಮುಖವಾಗಿವೆಯೆಂಬುದನ್ನು ಸರ್ಕಾರದವರು ಗಮನಿಸುತ್ತಿದ್ದಾರೆ' ಎಂದು ಹೇಳಿದ್ದೀರಿ. 'ಯಾವ ಮುಖವಾಗಿದೆ' ಎಂದು ಪದವನ್ನುಪಯೋಗಿಸಿರುವುದು ಸರಿಯೇ?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ರೀತಿ ಇಳಿಮುಖವಾಗಿದೆಯೆಂಬುದನ್ನು ನೋಡುತ್ತಿದ್ದೇವೆ. ಅಂದರೆ ಭಯೋತ್ಪಾದಕವಾಗಿದೆಯೇ, steep fall ಇದೆಯೇ ಎಂಬುದನ್ನು ನೋಡುತ್ತಿದ್ದೇವೆ, ಎಂದರ್ಥ.

ಶ್ರೀ ಎಸ್. ಸಿದ್ದಪ್ಪ.—ಆಹಾರ ಧಾನ್ಯಗಳ ಬೆಲೆ ಇಳಿದಿರುವುದು ಹೆಚ್ಚು ಬೆಳೆಯಾಗಿರುವುದರಿಂದ ಅಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರೈತರು ತಾವು ಬೆಳೆದ ಆಹಾರ ಸಾಮಗ್ರಿಗಳನ್ನು ಇಟ್ಟುಕೊಳ್ಳುವುದಕ್ಕೆ ಕಷ್ಟವಾಗಿ ಎಲ್ಲರೂ ಒಂದೇ ಸಾರಿ